ಶ್ರೀ ವೀರಭದ್ರಪ್ಪ ಈರಪ್ಪ.—ಅಲ್ಲಿ ಬಹಳ ಹಳ್ಳಗಳಿದ್ದರೂ ಕೆಲವೇ ಕಡೆ ಸರ್ವೆ ಮಾಡಲಾಗುತ್ತಿದೆ, ಅದಕ್ಕೆ ಕಾರಣವೇನು ?

ಶ್ರೀ ಅಲೂರು ಹನುಮಂತಪ್ಪ.—ಈಗ ಪ್ರಾರಂಭ ಮಾಡಿದ್ದೇವೆ. ಬಾಕಿ ಕಡೆಗಳಲ್ಲೂ ಸರ್ವೆ ಕೆಲಸ ಮುಂದುವರಿಯುತ್ತದೆ.

ಶ್ರೀ ಕೆ. ಲಕ್ಕಪ್ಪ.—ಈಗ ಅಲ್ಲಿ ಒಟ್ಟು ಎಷ್ಟು ಮಿಡಿಯಂ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ ?

ಶ್ರೀ ಅಲೂರು ಹನುಮಂತಪ್ಪ.—ಈಗ ಕೊಪ್ಪಳ ತಾಲ್ಲೂಕಿನಲ್ಲಿ 120 ಲಕ್ಷ ರೂಪಾಯಿಗಳಿಗೆ ಹಿರಿಹಳ್ಳ ಎಂದು ಒಂದು ಕೆರೆ ಕೆಲಸ ಸರ್ವೆ ಆಗುತ್ತಿದೆ. ಅಲ್ಲೇ ಮೈಲಾಪುರದ ಹತ್ತಿರ ಇನ್ನೊಂದು ಸರ್ವೆಕಾರ್ಯ ನಡೆಯುತ್ತಿದೆ. ಇನ್ನು ಕುಷ್ಟಗಿ ತಾಲ್ಲೂಕಿನಲ್ಲಿ ಹಿರೇನಾಲಾ ಎಂದು 33ಲಕ್ಷ ರೂಪಾಯಿಗಳ ಒಂದು ಕೆಲಸ ಸರ್ವೆ ಆಗುತ್ತಿದೆ. ಅಲ್ಲೇ ಇನ್ನೂ ಒಂದು ಕೆಲಸ ಬೇರೆ ಸರ್ವೆ ಆಗುತ್ತಿದೆ. ಅದೂ 33 ಲಕ್ಷ ರೂಪಾಯಿಗಳ ಅಂದಾಜಿನದು; ಅಲ್ಲಿ 1,200 ಎಕರೆ ಜಮೀನು ತರೀ ಸಾಗುವಳಿಗೆ ಬರಬಹುದು. ಹೀಗೆ ಕುಷ್ಟಗಿ ತಾಲ್ಲೂಕಿನಲ್ಲಿ ಒಂದು ಕೋಟಿ ಚಿಲ್ಲರೆ, ಕೊಪ್ಪಳ ತಾಲ್ಲೂಕಿನಲ್ಲಿ ಒಂದು ಕೋಟಿ ಚಿಲ್ಲರೆ ಕೆಲಸಗಳ ಸರ್ವೆ ಕಾರ್ಯ ನಡೆಯುತ್ತಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಇಲ್ಲಿ ತಾವು ಈಗ ನುಮಾರು 2 ಕೋಟಿ 27 ಲಕ್ಷ ಚಿಲ್ಲರೆ ಅಂದಾಜಿನ ಕೆಲಸಗಳನ್ನು ತಿಳಿಸಿದ್ದೀರಿ. ಇವುಗಳ ಪೈಕಿ ಸಣ್ಣ ನೀರಾವರಿ ಮತ್ತು ಮಿಡಿಯಂ ನೀರಾವರಿ ಕಾಂಗಾರಿಗಳೆಷ್ಟು ? ಇದಕ್ಕೆ ಕೇಂದ್ರದಿಂದ ಬರತಕ್ಕ ಧನ ಸಹಾಯವೆಷ್ಟು ?

ಶ್ರೀ ಅಲೂರು ಹನುಮಂತಪ್ಪ.—ಕೊಪ್ಪಳ ತಾಲ್ಲೂಕಿನಲ್ಲಿ ಸಣ್ಣ ಮತ್ತು ಮಿಡಿಯಂ ಪ್ರಾಜೆಕ್ಟುಗಳೆರಡೂ ಸೇರಿ ಅಲ್ಲಿ 1 ಕೋಟಿ 22 ಲಕ್ಷ ಚಿಲ್ಲರೆ.ಆಗಿರುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.— ಈ ಎರಡು ತೆರನಾದ ಪ್ರಾಜೆಕ್ಟುಗಳಿಗೂ ಇಡೀ ಸಂಸ್ಥಾನದಲ್ಲಿ ಒಟ್ಟು ಎಷ್ಟು ಹಣವನ್ನು ಖರ್ಚುಮಾಡಬೇಕೆಂದು ಇದ್ದೀರಿ ?

ಶ್ರೀ ಅಲೂರು ಹನುಮಂತಪ್ಪ.—ಎಸ್ಟಿಮೇಟುಗಳು ರೆಡಿಯಾಗಿ ಬಂದ ಹಾಗೆಲ್ಲಾ ಆವುಗಳನ್ನು ಮೂರನೆ ಪ್ಲಾನಿನಲ್ಲಿ ಸೇರಿಸಲಾಗುತ್ತದೆ. ನಮ್ಮ ಪ್ಲಾನಿಗೆ ಸಾಕಾಗುವಷ್ಟು ಹಣವನ್ನು ನಾವು ಕೇಂದ್ರ ಸರ್ಕಾರದವರಿಂದ ಪಡೆಯುತ್ತೇವೆ.

Collection of Land Revenue Surcharge from the Ryots of Byadgi Taluk.

* *Q.*—1107. Smt. SIDDAMMA MAILAR (Byadgi).—

Will the Government be pleased to state :—

(*a*) whether it has come to the notice of the Government that the land revenue surcharge is being collected from all the ryots whose holdings are less than five acres in Byadgi Taluk thus causing them great hardship ;

(*b*) the relief they propose to give to such of the ryots from whom this surcharge has been collected ?

A— Sri M. V. KRISHNAPPA (Minister for Revenue).—

(*a*) As per proviso to sub-section (i) of Section (3) of the Mysore Land Revenue Surcharge Amendment Act, 1962, any land-holder who satisfies the Tahsildar of the Taluk in which any dry land held by such land-holder is situated that the dry land held by him in the whole State does not exceed five acres, no surcharge shall be payable on the land revenue payable in respect of such dry land. It is for the concerned the land-holder to satisfy the Tahsildar that the dry land held by him in whole State does not exceed 5 acres and that he is exempted from payment of surcharge on the land revenue payable by him. If the

land-holder is not able to so satisfy the Tahsildar, the demand for surcharge has to be raised on the amount of land revenue payable by him. None of the land-holders of the Byadgi Taluk has approached the Tahsildar with any claim for such exemption for the surcharge. Surcharge was therefore recovered from all the land-holders.

(*b*) Does not arise in view of the reply to clause (*a*).

ಶ್ರೀಮತಿ ಸಿದ್ಧಮ್ಮ ಮ್ಯೆಲಾರ್.--ಸ್ವಾಮಿ, ನರ್‌ಧಾರ್ಜ್‌ನ್ನು ಯಾರೂ ಕೊಡುವುದಿಲ್ಲ ಎಂದು ಅಲ್ಲಯ ರೈತರುಗಳಾರೂ ಅಲ್ಲಯ ತಹಸೀಲ್ದಾರರಿಗೆ ಕಂಪ್ಲೇಂಟನ್ನು ಕೊಟ್ಟಿಲ್ಲ ಎಂದು ಹೇಳಲಾಗಿದೆ. ಸರ್ಕಾರದವರು ಅದನ್ನು ವಸೂಲು ಮಾಡಬಾರದೆಂದು ಅಲ್ಲಗೆ ಆದೇಶ ಕಳುಹಿಸಿದ್ದಾರೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ವಸೂಲು ಮಾಡಿಲ್ಲ ಎಂದು ಹೇಳಿಲ್ಲ. ನರ್‌ಧಾರ್ಜ್ ಕೊಡಬೇಕಾಗಿಲ್ಲದ ರೈತ ತನಗೆ ಇಡೀ ರಾಜ್ಯದಲ್ಲಿ 5 ಎಕರೆಗಳಿಗಿಂತ ಜಾಸ್ತಿ ಜಮೀನಿಲ್ಲ ಎಂದು ಹೇಳಿ ತಹಸೀಲ್ದಾರರ ಹತ್ತಿರ ಒಂದು ಮುಚ್ಚಳಿಕೆ ಬರೆದು ಕೊಟ್ಟರೆ ಅತ ನರಾಧಾರ್ಜ್ ಕೊಡಬೇಕಾಗಿಲ್ಲ. ಆದರೆ 5 ಎಕರೆಗಿಂತ ಭೂಮಿ ಕಡಮೆ ಇದೆ ಎಂದು ರುಜುವಾತು ಮಾಡುವ ಭಾರ ರೈತನ ಮೇಲಿದೆ. ಈಗ ಒಂದು ವೇಳೆ ಹಾಗೇನಾದರೂ ವಸೂಲ್ಮಾಡಿದ್ದರೆ ಅದನ್ನು ಮುಂದಿನ ವರ್ಷದ ಕಂದಾಯಕ್ಕೆ ಉತ್ತಾರ ಹಾಕಿಕೊಳ್ಳಲಾಗುತ್ತದೆ. ಅಂತೂ ಈಗಿರತಕ್ಕ ಕಾನೂನಿನ ಪ್ರಕಾರ ರೈತ ತನಗೆ 5 ಎಕರೆಗೆ ಮೇಲ್ಪಟ್ಟು ಜಮೀನಿಲ್ಲ ಎಂದು ಮೊದಲು ಅತ ರುಜುವಾತು ಮಾಡಬೇಕು.

ಶ್ರೀ ಸಿದ್ದಯ್ಯ ಕಾಶೀಮಠ.—ಈಗ ವಸೂಲಾಗಿರುವುದನ್ನು ಮುಂದಕ್ಕೆ ಉತ್ತಾರ ಹಾಕಿಕೊಳ್ಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು.

Sri G. V. GOWDA.—Is it not a fact that under the Surcharge Act itself, the burden of proof that he does not own more than five acres does not lie on the raiyat ?

Mr. SPEAKER.—The Hon'ble member is referring to an interpretation of the statutory provison. It is not a question.

ಶ್ರೀಮತಿ ನಾಶೀರಾಬಾಯಿ ಹೀರಾಚಂದ್ ಷಾ.—ಐದು ಎಕರೆಗಳಿಗಿಂತ ಹೆಚ್ಚಿಲ್ಲದೆ ಇರುವಂತಹ ಕೇಸುಗಳು ಸರಕಾರದ ಕಡೆಗೆ ಎಷ್ಟು ಬಂದಿದ್ದುವು ?

ಶ್ರೀ ಎಂ. ವಿ. ಕೃಷ್ಣಪ್ಪ.— ಅಂತಹವು ಏನೂ ಬಂದಿಲ್ಲ.

ಶ್ರೀ ಎಫ್. ಎಸ್. ತಾವರೆ.—ಕಾಯಿದೆ ಬಗ್ಗೆ ರೈತರಿಗೆ ಮಾಹಿತಿ ಇರುವುದಿಲ್ಲ. ಆದುದರಿಂದ ಅಲ್ಲರುವ ತರಾಟಗಳು ಐದು ಎಕರೆಗಳಿಗಿಂತ ಮೇಲೆ ಜಮೀನು ಇದ್ದರೆ ಕೊಡುವ ಹಾಗಿಲ್ಲ ಎಂದು ರೈತರಿಗೆ ಹೇಳುವ ಕಾರ್ಯಕ್ರಮವನ್ನೇಕೆ ಆರಂಭಿಸಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಬ್ಬರು ತರಾಟಿ ಇದ್ದರೆ ಹೇಳಬಹುದು. ನಾಲ್ಕಾರು ತರಾಟಿಗಳ ವಶಕ್ಕೆ ಸೇರಿದಂತಹ ಜಮೀನುಗಳೂ ಬರುತ್ತದೆ. ಆದ್ದರಿಂದ ಪ್ರತಿ ತರಾಟಿಗೂ ಹೇಳುವುದ ಕ್ಕಾಗುವುದಿಲ್ಲ.

ಶ್ರೀ ಎಫ್. ಎಸ್. ತಾವರೆ.—ಎಲ್ಲಾ ಕಡೆಯಲ್ಲರುವ ರೈತರಿಗೂ ಐದು ಎಕರೆಗೆ ಮೇಲ್ಪಟ್ಟು ಭೂಮಿ ಅದ್ದರೆ ಆದಕ್ಕೆ ನರ್‌ಧಾರ್ಜು ಕೊಡಬೇಕಾಗಿಲ್ಲ ಎನ್ನುವುದನ್ನು ತಿಳಿಯುವಂತೆ ಮಾಡುವುದು ಉತ್ತಮವಲ್ಲವೇ ?

ಶ್ರೀ ಎಂ. ವಿ ಕೃಷ್ಣಪ್ಪ.— ಇನ್ನು ಮುಂದೆ ಇದಕ್ಕೆ ಏರ್ಪಾಡುಗಳನ್ನು ಮಾಡುತ್ತೇವೆ.

ಶ್ರೀ ಗೋಪಾಲರಾವ್ ಘುಡ್ಡಿ.—ಇದಕ್ಕೆ ತಕ್ಕ ನಿಯಮಗಳನ್ನು ಮಾಡಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಿಯಮಗಳಿವೆ.

ಶ್ರೀ ಜಿ. ಎ. ತಿಪ್ಪಿಮ್ಮಪ್ಪಗೌಡ.—ಐದು ಎಕರೆಯೊಳಗೆ ಇರುವಂತಹ ರೈತರು ಬಂದು ಶ್ಯಾನುಭೋಗರುಗಳನ್ನು ನರ್‌ಧಾರ್ಜು ಕೊಡಬೇಕಾಗಿಲ್ಲ ಎಂದು ಹೇಳಿದರೂ ಅವರು ಮೊದಲು ಹಣವನ್ನು ಸರಕಾರಕ್ಕೆ ಕಟ್ಟಿ ಆಮೇಲೆ ಸರಕಾರಕ್ಕೆ ಬರೆದು ರೀಫಂಡು ತರಿಸಿಕೊಳ್ಳಬಹುದು ಎಂದು ಹೇಳುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು. ಅನೇಕ ಕಡೆ ಹಾಗೆ ನಡೆದಿದೆ. ರೂಲ್ಸುಗಳನ್ನು ನೋಡುವಾಗಲೂ ಹಾಗೆ ಅರ್ಥ ಬರುವಂತಾಗುತ್ತದೆ. ಆದರಿಂದ ಮೊದಲು ಹಣವನ್ನು ಕಟ್ಟಿ ಅನಂತರ ರೀಫಂಡು ಪಡೆಯಬಹುದು ಎಂದು ಹೇಳಿರಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—... * * * *

**** Expunged as ordered by the Chair.

Mr. SPEAKER.—I will expunge what the Hon' Member said as .....

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗ್ರಾಮಗಳ ಲೆಕ್ಕಪತ್ರಗಳನ್ನು ಜಮಾಬಂದಿಯಲ್ಲಿ ತನಿಖೆ ಮಾಡಿ ಅದಕ್ಕೆ ಟಿಕ್ ಹಾಕುತ್ತಾರೆ ಎಂದು ಮಂತ್ರಿಗಳು ಹೇಳಿದರು. ಆದರೆ ಈ ಜಮಾಬಂದಿಯಲ್ಲಿ ಬರೀ ತಹಶೀಲುದಾರರ ಸ್ಕೆನಿಗಾಗಿ ಅವರು ಸೇರುತ್ತಾರೆ ಎನ್ನುವುದು ತಮಗೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.— ಹೌದು, ಪೂರ್ವದಲ್ಲಿ ಜಮಾಬಂದಿ ಎನ್ನುವುದು ನಮ್ಮ ಮನೆಯಲ್ಲಿಯೇ ನಡೆಯುತ್ತಿತ್ತು. ನಮ್ಮ ಮನೆಯಲ್ಲಿಯೇ ಎಲ್ಲಾ ಶಾನುಭೋಗರುಗಳೂ ಬಂದು ಕೆಲಸ ಮಾಡುತ್ತಿದ್ದರು. ಆಗ ಜಮಾಬಂದಿ ನಡೆಯುತ್ತಿದ್ದಾಗ ಲೆಕ್ಕ ಪತ್ರಗಳನ್ನು ವೆರಿಫೈ ಮಾಡಿ ಸರಿ ಪಡಿಸಿಕೊಳ್ಳುತ್ತಿದ್ದರು, ರೆವೆನ್ಯೂ ಭಾಷೆಯಲ್ಲಿ ಜಮಾಬಂದಿ ಎಂದರೆ ಲೆಕ್ಕಗಳನ್ನು ವೆರಿಫೈ ಮಾಡುವುದು ಎಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಅಧ್ಯಕ್ಷರು ಈಗ ಮಾನ್ಯ ಮಂತ್ರಿಗಳು ಹೇಳಿದುದನ್ನು ....expunge ಮಾಡಬಹುದು.

ಶ್ರೀ ಇ. ನಾರಾಯಣ ಗೌಡ.—ರೈತರಿಗೆ ಸಾಧಾರಣವಾಗಿ ಒಂದು ರೂಪಾಯಿ ರೀಫಂಡು ಸರಕಾರದಿಂದ ಬರಬೇಕಾದರೆ ಅದಕ್ಕೆ 3-4 ರೂಪಾಯಿಗಳಷ್ಟು ಖರ್ಚು ಮಾಡಬೇಕಾಗಿ ಬರುತ್ತದೆ. ಆದರಿಂದ ತಾಲ್ಲೂಕು ಆಫೀಸಿನಲ್ಲಿರುವ ರೆವೆನ್ಯೂ ಅಧಿಕಾರಿಗಳು ಹಳ್ಳಿಗಳ ಕಡೆ ಹೋಗುವಾಗ ಪ್ರತಿಯೊಬ್ಬ ರೈತರಿಗೂ ತಿಳಿಯುವಂತೆ ಇದರ ಬಗ್ಗೆ ಪರಿಚಯವನ್ನು ಮಾಡುವುದು ಸರಿಯಾಗಿರುತ್ತದಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಬಹಳ ಕಷ್ಟ. ಇದರಂತೆ ಮಾಡಲಾಗುವುದಿಲ್ಲ. ಕಂದಾಯ ವಸೂಲಿ ಮಾಡುವಾಗ ತೊಂದರೆಯಾಗುತ್ತದೆ. ಮುಂದೆ ಎಲ್ಲರಿಗೂ ತಿಳಿಯುವಂತೆ ತಕ್ಕ ಕ್ರಮ ಗಳನ್ನು ತಿಳಿಸುತ್ತೇವೆ.

Restoration of Chikkere Tank in Bandhalli Village, Krishnarajanagar Taluk.

*Q.—1127. Sri KADIDAL MANJAPPA (Sringeri).—

Will the Government be pleased to state :—

(*a*) the date on which Government have passed orders for the restoration of Chikkere Tank, Bandhalli Village, Krishnarajanagar Taluk ;

(*b*) the amount spent so far for the restoration work of the above tank ;

(*c*) whether it is true that after the disposal of a writ petition in relation to this tank, the Government issued a stay order at the instance of one Sri Channaveerappa staying the execution of the work ;

(*d*) whether it is true that the stay order was vacated on 25th August 1962 and that the Chief Minister directed that the work should be completed ;

(*e*) whether it is true that once again a stay order was issued subsequently on 1st December 1962 ;

(*f*) whether it is true that recently, *i. e.*, on 31st August 1963, Government have taken a decision to abandon the work altogether and to dispose of the tank bed for cultivation ?

A.—Sri ALUR HANUMANTHAPPA (Deputy Minister for Minor Irrigation).—

(*a*) 25-6-1959.
(*b*) 5,494.
(*c*) No.